ದಿನಾಂಕಃ 25–07–2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ- ವಾದಿ ಪರ ವಕೀಲರಿಂದಃ

ನಾನು ಈ ದಾವೆಯಲ್ಲಿ 1 ನೇ ವಾದಿ ಇದ್ದು, ನನ್ನ ಮುಖ್ಯ ವಿಚಾರಣೆಯ ಬದಲಾಗಿ ನಾನು ನನ್ನ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ ಅದರಲ್ಲಿರುವ ಎಲ್ಲಾ ವಿಷಯಗಳನ್ನು ನಾನು ನನ್ನ ವಕೀಲರಿಗೆ ಹೇಳಿ, ಬರೆಯಿಸಿ, ಓದಿಸಿ ತಿಳಿದುಕೊಂಡು ಮನಗೊಂಡ ನಂತರ ಸಹಿ ಮಾಡಿರುತ್ತೇನೆ. ನನ್ನ ಪ್ರಮಾಣಪತ್ರದಲ್ಲಿರುವ ಎಲ್ಲಾ ವಿಷಯಗಳು ನಿಜ ಮತ್ತು ಸತ್ಯಸಂಗತಿಗಳಾಗಿರುತ್ತವೆ.

ನಾನು ದಿನಾಂಕಃ 28.11.1997 ರ ಜಮೀನಿನ ಕ್ರಯದ ಕರಾರು ಪತ್ರ ಸರ್ವೆ ಸಂಖ್ಯೆ 93/18 ಕ್ಕೆ ಸಂಬಂಧಿಸಿದ ಆರ್ ಟಿ ಸಿ, ಲೀಗಲ್ ನೋಟಿಸ್ ನ ಕಛೇರಿ ಪ್ರತಿ, ಅಂಚೆ ಸ್ವೀಕೃತಿ ಪತ್ರ, ಅಂಚೆ ರಶೀದಿ, ಮರು ತಿಳುವಳಿಕೆ ಪತ್ರ, ಮ್ಯುಟೇಷನ್ ರಿಜಿಸ್ಟರ್ ನ ದೃಢಿಕೃತ ನಕಲು, ಸರ್ವೆ ಸಂಖ್ಯೆ 93/1, 93/18 ಬಿ ಗೆ ಸಂಬಂಧಿಸಿದ ಆರ್ ಟಿ ಸಿಯ ದೃಢಿಕೃತ ನಕಲುಗಳು, ದಿಃ 24.11.1997 ರ ಕ್ರಯ ಪತ್ರದ ದೃಢಿಕೃತ ನಕಲು ಸರ್ವೆ ಸಂಖ್ಯೆ 93/18 ಹಾಗೂ 93/43 ಕ್ಕೆ ಸಂಬಂಧಿಸಿದ ಆರ್ ಟಿ ಸಿ ಗಳು, ದಿಃ 28.06.2013 ರ ಕ್ರಯ ಪತ್ರದ ಆನ್ ಲೈನ್ ಪ್ರತಿ, ಸರ್ವೆ 93/44 ಕ್ಕೆ ಸಂಬಂಧಿಸಿದ ಆರ್ ಟಿ ಸಿ, ದಿಃ 28.06.2013 ರ ಕ್ರಯ ಪತ್ರದ ಆನ್ ಲೈನ್ ಪ್ರತಿ ಮ್ಯುಟೇಷನ್ ರಿಜಿಸ್ಟರ್ ವಹಿಯ ದೃಢಿಕೃತ ಪ್ರತಿ, ಸರ್ವೆ ಸಂಖ್ಯೆ 93/42 ಕ್ಕೆ ಸಂಬಂಧಿಸಿದ ಆರ್ ಟಿ ಸಿ, ಮ್ಯುಟೇಷನ್ ರಿಜಿಸ್ಟರ್ ವಹಿಯ ದೃಢಿಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿಃ1 ರಿಂದ ನಿಪಿಃ18 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಸಲ್ಲಿಸಿರುವ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

ಪಾಟೀ ಸವಾಲುಃ ಪ್ರತಿವಾದಿಗಳ ಪರ

(ಪ್ರತಿವಾದಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆಂದು ಸಮಯಾವಕಾಶ ಕೋರಿದ್ದು ನೀಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ

(ದೇವರಾಜ್ ವೈ.ಹೆಚ್.)
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ,
ಹಾಸನ.